ಕೃತಿಯೊಂದು ಆಯಾಕಾಲಕ್ಕೆ ತಕ್ಕುನಾಗಿ ರೂಪಾಂತರಗೊಳ್ಳುವ ಪರಿ ಇದು. ಮಹಾಭಾರತ ಮತ್ತು ರಾಮಾಯಣಗಳಂತಹ ಸಾವಿರಾರು ವರ್ಷಗಳ ಜೀವಂತಕೃತಿಗಷ್ಟೇ ಇದು ಸಾಧ್ಯ. ನಮ್ಮ ಇಂದಿನ ಮನುಷ್ಯ ಭಾವಗಳು ಮತ್ತು ದಕ್ಕುವ ಸಾಹಿತ್ಯಿಕ ಪರಿಕರಗಳಿಗೆ ಅನುಗುಣವಾಗಿ ವ್ಯಾಸಭಾರತದ ರೂಪಾಂತರವಾಗಿ 'ಪರ್ವ'ವು ಬಂದಿದೆ. ಅದರ ಅರ್ಥವ್ಯಾಪ್ತಿ ಈವತ್ತಿನದು ಮತ್ತು ಅದರ ಸಾಹಿತ್ಯಿಕ ಸ್ವಾತಂತ್ರ್ಯವು ಆಧುನಿಕ ಕಾಲದ್ದು. 'ಇಡೀ ಭಾರತೀಯ ಸಾಹಿತ್ಯದಲ್ಲಿ ಕೃಷ್ಣನಂಥ ಸಂಕೀರ್ಣ ಪಾತ್ರ ಬೇರೊಂದಿಲ್ಲ' ಎನ್ನುವ ಕಾದಂಬರಿಕಾರರ ಒಂದು ಮಾತೇ ನನ್ನ ಈ ಪ್ಯಾರಾಗ್ರಾಫಿನ ಸಾರಾಂಶವನ್ನು ಹಿಡಿದುಕೊಡುತ್ತದೆ.

ಬಲಪಂಥೀಯ ನಿಲುವುಗಳನ್ನು ಹೊಂದಿದ್ದರು ಮತ್ತು ಹಿಂದೂ ಧರ್ಮದ ಪರವಾಗಿದ್ದರು ಎನ್ನುವ ಕಾರಣಕ್ಕೆ ಭೈರಪ್ಪನವರನ್ನು ಸಂಪ್ರದಾಯವಾದಿ ಎನ್ನುವವರಿಗೆ ಅವರ 'ಪರ್ವ' ಮತ್ತು 'ಉತ್ತರ ಕಾಂಡ' ಕಾದಂಬರಿಗಳು ಸೂಕ್ತ ಪ್ರತಿಕ್ರಿಯೆಗಳಾದಾವು. ರಾಮ ಮತ್ತು ಕೃಷ್ಣರನ್ನು ಸಂಪೂರ್ಣವಾಗಿ ಮನುಷ್ಯ ನೆಲೆಯಲ್ಲಿ ಚಿತ್ರಿಸುವ ಕಾದಂಬರಿಕಾರ ಸುಲಭಕ್ಕೆ ನಮ್ಮ ವ್ಯಾಖ್ಯಾನಗಳಿಗೆ ದಕ್ಕನು. ಒಮ್ಮೆ ಒಂದು ಸಭೆಯಲ್ಲಿ ಒಬ್ಬ ಸಭಿಕರು, ತಮ್ಮ ನಿಲುವುಗಳನ್ನು ಜೋರು ದನಿಯಲ್ಲಿ ಮತ್ತು ಆಕ್ರೋಶದಲ್ಲಿ ವ್ಯಕ್ತಪಡಿಸುವವರು, 'ನೀವೇಕೆ ಸಂಪ್ರದಾಯಗಳನ್ನು ವಿರೋಧಿಸುವುದಿಲ್ಲ?' ಎಂದು ಪ್ರಶ್ನಿಸಿದಾಗ ಭೈರಪ್ಪನವರು ಸಮಾಧಾನದ ಧ್ವನಿಯಲ್ಲಿ, 'ನಾನು ನಂಬದಿದ್ದ ಮಾತ್ರಕ್ಕೆ ಹೊರಗೆ ನಂಬುವವರು ಇಲ್ಲವೇ?' ಎಂದು ಉತ್ತರಿಸಿದ್ದರು. ದೇವರ ನಂಬುಗೆಯ ವಿಚಾರದಲ್ಲಿ ತಾವೊಬ್ಬ ನಿರ್ಲಿಪ್ತ (ಅಗ್ನಾಸ್ಟಿಕ್) ಎನ್ನುವುದನ್ನು ಅವರು ಎಂದೋ ವ್ಯಕ್ತಪಡಿಸಿದ್ದರು. ಹಾಗಿದ್ದಾಗಲೂ, ನಂಬುಗೆಯ ಪಾತ್ರಗಳನ್ನು ಸೃಷ್ಟಿಸುವಲ್ಲಿ ಒಬ್ಬ ಕಥೆಗಾರ ತನ್ನ ಸ್ವನಂಬುಗೆಗಳಿಂದ ಹೇಗೆ ಮುಕ್ತನಾಗಬೇಕು ಮತ್ತು ನಿಜಜಗತ್ತಿಗೂ ಕೃತಿಜಗತ್ತಿಗೂ ನಡುವೆ ಸ್ಪಷ್ಟ ತರತಮ ಜ್ಞಾನವಿಲ್ಲದೆ ಮತ್ತು ಲೇಖಕ ಖುದ್ದು ನಂಬುವ, ನಂಬದ ಮೌಲ್ಯಗಳೆಡೆಗೆ ವ್ಯತ್ಯಾಸವಿಲ್ಲದಂತೆ ಸೂಕ್ಷ್ಮ ಸಂವೇದನೆಗಳನ್ನು ಹೊಂದಿಲ್ಲದೆ ಓದುಗರನ್ನು ಮುಟ್ಟುವ ಸಾಹಿತ್ಯವನ್ನು ಸೃಷ್ಟಿಸುವುದು ಸಾಧ್ಯವಿಲ್ಲ ಎನ್ನುವುದನ್ನು ಚೆನ್ನಾಗಿ ಅರಿತವರಾಗಿದ್ದರು. ಸಂಪ್ರದಾಯಗಳ ಆಚೆಗೆ ಧರ್ಮದ ಮೌಲ್ಯಗಳನ್ನು ಮತ್ತು ದರ್ಶನಗಳನ್ನು ಗುರುತಿಸಲು ಅಪಾರ ಸಾಧನೆಯು ಬೇಕು. ಅವನ್ನು ಸೃಜನಶೀಲ ಸಾಹಿತ್ಯವಾಗಿಸುವುದೆಂದರೆ ಸಾಧನೆಯ ಮತ್ತು ಪ್ರತಿಭೆಯ ಮುಂದಿನ ಉನ್ನತ ಹಂತವಾಗುತ್ತದೆ. ಈವತ್ತಿನ ರಾಜಕೀಯ ಚಿಂತನೆಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಭೈರಪ್ಪನವರ ಮೌಲ್ಯಮಾಪನ ಮಾಡಹೊರಡುವವರು ಅವರು ಏರಿದ ಎತ್ತರವನ್ನೂ ಗಮನಿಸಬೇಕಾಗುತ್ತದೆ.

ಇಲ್ಲಿ ಇನ್ನೊಂದು ವಿಚಾರವನ್ನು ನಾನು ಹೇಳಲೇಬೇಕು. ಅತಿ ದೂಷಣೆಯಂತೆಯೇ ಅತಿ ಆರಾಧನೆಯಿಂದಲೂ ನಾವು ಭೈರಪ್ಪನವರ ಸಾಹಿತ್ಯವನ್ನು ರಕ್ಷಿಸಬೇಕಾಗಿದೆ. ನಮ್ಮ ಕಡೆ 'ಹುಲಿಮುದ್ದು' ಎನ್ನುವ ಬಳಕೆಯಿದೆ. ದ್ವೇಷದಿಂದ ಕಚ್ಚಿದರೂ, ಅತಿಪ್ರೀತಿಯಿಂದ ಕಚ್ಚಿದರೂ, ಹಲ್ಲು ಹಲ್ಲೇ. ಈ ಅತಿಪ್ರೀತಿಯ ಅನೇಕರಿಗೆ ಸಾಹಿತ್ಯಪ್ರೀತಿಗಿಂತಲೂ ಹೆಚ್ಚಾಗಿ ಅವರು ಬಲಪಂಥೀಯರಾಗಿದ್ದರು ಎನ್ನುವುದು ಪ್ರೀತಿಗೆ ಮೂಲಕಾರಣವಾಗುತ್ತದೆ. ಹೋದ ಶತಮಾನದ ಅದ್ಭುತ ಕವಿ ಪ್ಯಾಬ್ಲೋ ನೆರೂಡ ಎಡಪಂಥೀಯರಾಗಿದ್ದರು ಎನ್ನುವ ಕಾರಣಕ್ಕೆ ಅವರ ಮರಣದ ಐವತ್ತು ವರ್ಷಗಳ ತರುವಾಯವೂ ಅವರ ಸಾಹಿತ್ಯವು ಆಗಾಗ ಕಟಕಟೆಯಲ್ಲಿ ನಿಲ್ಲುತ್ತಲೇ ಇರುತ್ತದೆ. ವಾಗ್ಯುದ್ಧಗಳು ನಡೆಯುತ್ತಲೇ ಇರುತ್ತವೆ. ಯಾವ ಬರಹಗಾರನೂ ಎಲ್ಲ ಕಾಲಕ್ಕೆ ಎಲ್ಲರನ್ನೂ ಮೆಚ್ಚಿಸಲಾರ. ಅದು ವ್ಯಾಸ, ವಾಲ್ಮೀಕಿಯರಿಗೂ ಸಾಧ್ಯವಾಗಲಿಲ್ಲ. ಯಾವುದನ್ನು ಹಿಡಿಯಬೇಕು, ಯಾವುದನ್ನು ಬಿಡಬೇಕು ಎನ್ನುವ ಹಂಸಕ್ಷೀರ ನ್ಯಾಯವು ಓದುಗನಲ್ಲಿ ಸದಾ ಜಾಗೃತವಾಗಿರಬೇಕು.

ಮೂವತ್ತೈದು ವರ್ಷಗಳ ಹಿಂದೆ ತಮ್ಮ 'ವಿಮರ್ಶೆಯ ನೆಲೆ- ಬೆಲೆ' ಲೇಖನದಲ್ಲಿ ಭೈರಪ್ಪನವರು ಹೇಳುವ ಮಾತಿದು.

